**ಕರ್ನಾಟಕ ವಿಧಾನ ಪರಿಷತ್ತು**

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 612**
**ಸದಸ್ಯರ ಹೆಸರು : ಶ್ರೀ ಬಸನಗೌಡ ಬಾದರ್ಲಿ**
**(ವಿಧಾನ ಸಭೆಯಿಂದ ಚುನಾಯಿತರಾದವರು)**
**ಉತ್ತರಿಸುವ ದಿನಾಂಕ : 14.08.2025**
**ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು**

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ತುಂಗಭದ್ರಾ ಜಲಾಶಯಕ್ಕೆ ಡ್ಯಾಂ ಸೇಫ್ಟಿ ಕಮಿಟಿ ವರದಿ ಪ್ರಕಾರ ಅಣೆಕಟ್ಟೆಯ ಎಲ್ಲಾ ಗೇಟ್‌ಗಳನ್ನು ಬದಲಾವಣೆ ಮಾಡುವ ಉದ್ದೇಶ ಸರ್ಕಾರದ ಮುಂದಿದೆಯೇ | ತುಂಗಭದ್ರಾ ಯೋಜನೆಯು ಅಂತರ ರಾಜ್ಯ (ಕರ್ನಾಟಕ, ಆಂಧ್ರಪ್ರದೇಶ ಮತ್ತು ತೆಲಂಗಾಣ) ಯೋಜನೆಯಾಗಿದ್ದು, ತುಂಗಭದ್ರಾ ಅಣೆಕಟ್ಟೆಯ ಗೇಟುಗಳ ನಿರ್ವಹಣೆಯು ತುಂಗಭದ್ರಾ ಮಂಡಳಿ(TB Board)ಯ ವ್ಯಾಪ್ತಿಯಲ್ಲಿರುತ್ತದೆ.<br><br>ತುಂಗಭದ್ರಾ ಜಲಾಶಯದ ಗೇಟುಗಳನ್ನು ಬದಲಾಯಿಸುವ ಸಂಬಂಧದಲ್ಲಿ ತುಂಗಭದ್ರಾ ಮಂಡಳಿಯು ಈ ಕೆಳಕಂಡಂತೆ ಕ್ರಮ ವಹಿಸಿರುತ್ತದೆ:<br><br>1. ಕಳೆದ ವರ್ಷ ಕೊಚ್ಚಿಹೋದ ಗೇಟ್ ನಂ.19ಕ್ಕೆ ಹೊಸ ಗೇಟನ್ನು ಅಳವಡಿಸುವಿಕೆ ಕಾಮಗಾರಿಯ ಟೆಂಡರ್ ವಹಿಸಲಾಗಿದ್ದು, ಪ್ರಸಕ್ತ ಸಾಲಿನಲ್ಲಿ early monsoon ಮತ್ತು ಜೂನ್ ಮಾಹೆಯಲ್ಲಿ ಜಲಾಶಯಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಒಳಹರಿವು ಬಂದ ಕಾರಣ ಕಾಮಗಾರಿ ಕೈಗೊಳ್ಳಲು ಸಾಧ್ಯವಾಗಿರುವುದಿಲ್ಲ. ಆದ್ದರಿಂದ, ಜಲಾಶಯದಲ್ಲಿ ನೀರಿನ ಮಟ್ಟ 1613 ಅಡಿಗೆ ಇಳಿದ ನಂತರ ಕೈಗೆತ್ತಿಕೊಳ್ಳಲಾಗುವುದು.<br>2. ಅಣೆಕಟ್ಟೆಯ ಬಾಕಿ 32 ಗೇಟುಗಳನ್ನು ಬದಲಾಯಿಸುವ ಕಾಮಗಾರಿಯ ಟೆಂಡರ್ ವಹಿಸಲಾಗಿದ್ದು, 15 ತಿಂಗಳ ಕಾಲಾವಧಿ ನೀಡಲಾಗಿದೆ.<br>3. ದಿನಾಂಕ:03.06.2025ರಂದು ತುಂಗಭದ್ರಾ ಮಂಡಳಿಯ 223ನೇ ಸಭೆಯಲ್ಲಿ ಗೇಟುಗಳ ಬದಲಾವಣೆಯನ್ನು ಕಾರ್ಯವನ್ನು ಆದ್ಯತೆ ಮೇರೆಗೆ ಜೂನ್-2026ರೊಳಗಾಗಿ ಪೂರ್ಣಗೊಳಿಸಲು ನಿರ್ಧರಿಸಲಾಗಿದೆ.<br><br>ತುಂಗಭದ್ರಾ ಅಣೆಕಟ್ಟೆಯ 19ನೇ ಸಂಖ್ಯೆಯ ಗೇಟ್ ಕೊಚ್ಚಿಹೋದ ಘಟನೆಯ ನಂತರ ಅಣೆಕಟ್ಟೆಯ ಸುರಕ್ಷತೆ, ಬಾಕಿ 32 ಗೇಟುಗಳ ಸ್ಥಿತಿಗತಿ, ಗೇಟುಗಳ ಬದಲಾವಣೆ ಕುರಿತು ತುಂಗಭದ್ರಾ ಮಂಡಳಿಯೊಂದಿಗೆ ರಾಜ್ಯ ಸರ್ಕಾರವು ನಿರಂತರವಾಗಿ ಅನುಸರಣೆ ಮಾಡುತ್ತಿದೆ. |
| ಆ) | ಇದ್ದಲ್ಲಿ ಯಾವ ಕಾಲಮಿತಿಯೊಳಗೆ ಗೇಟ್‌ಗಳ ಬದಲಾವಣೆ ಕಾರ್ಯವನ್ನು ಮುಕ್ತಾಯಗೊಳಿಸಲಾಗುತ್ತದೆ; | |
| ಇ) | 2025-26ನೇ ಸಾಲಿನ ಹಿಂಗಾರು ಬೆಳೆಗಳಿಗೆ ರೈತರಿಗೆ ಸದರಿ ಗೇಟ್‌ಗಳಿಂದ ನೀರು ಬಿಡಲು ಸಾಧ್ಯವಾಗುತ್ತದೆಯೇ? | ದಿನಾಂಕ:03.06.2025ರಂದು ತುಂಗಭದ್ರಾ ಮಂಡಳಿಯ 223ನೇ ಸಭೆಯಲ್ಲಿ, NDT method ಮೂಲಕ KS NDT ಸಂಸ್ಥೆ ನಡೆಸಿರುವ Comprehensive health Assessment of Gatesನ ವರದಿ ಮತ್ತು ಸದರಿ ವರದಿಯ ಕುರಿತು ತಜ್ಞರುಗಳ ಸಲಹೆಯನ್ನು ಗಮನದಲ್ಲಿರಿಸಿಕೊಂಡು, ಅಣೆಕಟ್ಟೆಯ ಸುರಕ್ಷತೆಯ ದೃಷ್ಟಿಯಿಂದ ಮತ್ತು ಗೇಟುಗಳ ಅಳವಡಿಕೆ ಕಾಮಗಾರಿಗಳ ಅನುಷ್ಠಾನ ಪ್ರಯುಕ್ತ, ಪ್ರಸಕ್ತ, 2025-26ನೇ ಜಲ ವರ್ಷದಲ್ಲಿ ಜಲಾಶಯದಲ್ಲಿ ನೀರಿನ ಸಂಗ್ರಹಣೆಯ ಮಟ್ಟವನ್ನು FRL 1633 ft ಗೆ ಬದಲಾಗಿ 1626 ಅಡಿಗೆ ಅಂದರೆ 80 ಟಿಎಂಸಿ ನೀರಿನ ಸಂಗ್ರಹಣೆಗೆ ಸೀಮಿತಗೊಳಿಸಲು ನಿರ್ಧರಿಸಲಾಗಿರುತ್ತದೆ.<br><br>ಸದರಿ ಪ್ರಮಾಣವು ಮೂರು ರಾಜ್ಯಗಳಲ್ಲಿ ಒಂದು ಬೆಳೆಗೆ ನೀರಾವರಿ ಮತ್ತು ಕುಡಿಯುವ ನೀರಿನ ಅಗತ್ಯತೆಗಳಿಗೆ ನೀರನ್ನು ಪೂರೈಸಲು ಸಾಧ್ಯವಾಗುತ್ತದೆ ಎಂದು ತುಂಗಭದ್ರಾ ಮಂಡಳಿಯು ತಿಳಿಸಿರುತ್ತದೆ. |

**ಸಂಖ್ಯೆ:ಜಸಂಇ 95 ಎಂಎಲ್ಎ 2025**

**(ಡಿ.ಕೆ. ಶಿವಕುಮಾರ್)**
**ಉಪ ಮುಖ್ಯಮಂತ್ರಿ.**